ಹೊತ್ತಿನ ಶಿಕ್ಷಣ ವಿದ್ಯಾರ್ಥಿಗಳನ್ನು ಜೂಜಿನ ಕುದುರೆಗಳಂತೆ ಭಾವಿಸಿದೆ. ಅಂಕ ಗಳಿಕೆಯಷ್ಟೇ ಗುರಿಯಾದ ವ್ಯವಸ್ಥೆಯಲ್ಲಿ ಶಿಕ್ಷಣದಿಂದ ದೊರೆಯಬಹುದಾದ ನೈತಿಕತೆ, ಸಂಸ್ಕಾರ ವಿದ್ಯಾರ್ಥಿಗೆ ದೊರೆಯದೆ ಹೋಗುತ್ತಿದೆ.

ಒಂದೆಡೆ ಶಿಕ್ಷಣದಿಂದ ದೊರೆಯಬೇಕಾದ ಮೌಲ್ಯಗಳಿಂದ ವಿದ್ಯಾರ್ಥಿ ವಂಚಿತನಾಗುತ್ತಿದ್ದಾನೆ. ಅದೇ ಕಾಲಕ್ಕೆ, ಅಂಕ ಗಳಿಕೆಯ ಒತ್ತಡದಲ್ಲಿ ವಿದ್ಯಾರ್ಥಿ ಹೈರಾಣಾಗುತ್ತಿದ್ದಾನೆ. ಪರೀಕ್ಷೆಗಳಲ್ಲಿನ ಯಶಸ್ಸು, ಆ ಮೂಲಕ ಹೆಚ್ಚಿನ ಸಂಬಳದ ಉದ್ಯೋಗ ಗಳಿಕೆಯಷ್ಟೇ ಶಿಕ್ಷಣದ ಉದ್ದೇಶ ಎನ್ನುವ ಮನೋಭಾವ, ನಮ್ಮ ಎಳೆಯರ ಸಂವೇದನೆಗಳನ್ನು ನಷ್ಟಗೊಳಿಸುವುದರ ಜೊತೆಗೆ ಅವರಲ್ಲಿನ ಸಾಮಾಜಿಕ ಸ್ಪಂದನಗಳನ್ನು ನಾಶಗೊಳಿಸುತ್ತಿದೆ.

ಜಾಗತೀಕರಣದ ಪರಿಣಾಮವಾಗಿ ಶಿಕ್ಷಣ ಹಾಗೂ ಉದ್ಯೋಗಕ್ಷೇತ್ರಗಳಲ್ಲಿ ವಿಪರೀತ ಎನ್ನಬಹುದಾದ ಸ್ಪರ್ಧೆ ಹಾಗೂ ಒತ್ತಡ ಕಾಣಿಸಿಕೊಂಡಿದೆ. ಈ ಅನಾರೋಗ್ಯಕರ ಒತ್ತಡ ಹಿಂಸೆ–ಕ್ರೌರ್ಯದ ರೂಪದಲ್ಲಿ ಹೊರಹೊಮ್ಮುತ್ತಿದೆ.

## ಮಾಧ್ಯಮಗಳ ಹೊಣೆಗೇಡಿತನ

ಸಾಮಾಜಿಕ ಹೊಣೆಗಾರಿಕೆಯೆನ್ನುವುದು ಮಾಧ್ಯಮ ಸಂಹಿತೆಯ ಬಹು ಮುಖ್ಯವಾದ ಭಾಗ. ಆದರೆ, ಈ ಹೊತ್ತಿನ ಮಾಧ್ಯಮಗಳಿಗೆ ಜನರನ್ನು ರಂಜಿಸುವುದಷ್ಟೇ ಮುಖ್ಯವಾಗಿದೆ. ಬಹುತೇಕ ಸಂದರ್ಭಗಳಲ್ಲಿ ರಂಜನೆಯೆನ್ನುವುದು ಪ್ರಚೋದನೆಯೂ ಆಗಿರುತ್ತದೆ.

ನಾಗರಿಕ ಸಮಸ್ಯೆಗಳನ್ನು ಚರ್ಚಿಸುವುದು, ಆ ಸಮಸ್ಯೆಗಳ ಬಗ್ಗೆ ಸರ್ಕಾರದ ಗಮನಸೆಳೆಯುವುದು, ಸಾರ್ವಜನಿಕ ಅಭಿಪ್ರಾಯ ರೂಪಿಸುವುದು ಸುದ್ದಿ ಮಾಧ್ಯಮಗಳ ಕೆಲಸ. ಆದರೆ, ಇಂದಿನ ಮಾಧ್ಯಮಗಳಿಗೆ ನಾಗರಿಕರ ಸಮಸ್ಯೆಗಳು ಕನಿಷ್ಠ ಆದ್ಯತೆಯಾಗಿವೆ. ಸಮುದಾಯಗಳ ನಡುವೆ ಸಂಘರ್ಷ ಉಂಟುಮಾಡುವ ಕ್ರಿಯೆಗಳ ಬಗ್ಗೆ ಮಾಧ್ಯಮಗಳಿಗೆ ಇನ್ನಿಲ್ಲದ ಆಸಕ್ತಿ.

ಚಲನಚಿತ್ರ ಹಾಗೂ ಕಿರುತೆರೆ ಮಾಧ್ಯಮಗಳು ಕೂಡ ರಂಜನೆಯ ಹೆಸರಿನಲ್ಲಿ ಅಗ್ಗದ ಸರಕನ್ನು ಪ್ರದರ್ಶಿಸುತ್ತಿವೆ. ಹಿಂಸೆ, ಅಶ್ಲೀಲತೆ ಸೇರಿದಂತೆ ಮಾನಸಿಕ ಕ್ಷೋಭೆಗೆ ಕಾರಣವಾಗುವ ಸಂಗತಿಗಳೇ ದೃಶ್ಯಮಾಧ್ಯಮಗಳಲ್ಲಿ ತುಂಬಿವೆ. ಆನ್‌ಲೈನ್‌ನಲ್ಲಿ ಲಭ್ಯವಿರುವ ಮನರಂಜನೆಯ ಹೆಸರಿನ ಸುನಾಮಿಗೆ ನೈತಿಕತೆಯ ಯಾವ ನಿಯಂತ್ರಣವೂ ಇಲ್ಲ. ಟಿವಿ ಶೋಗಳು, ಸಿನಿಮಾಗಳು, ವಿಡಿಯೊ ಗೇಮ್‌ಗಳು ತೀವ್ರ ಹಿಂಸೆ, ಶೋಷಣೆ, ಕೊಲೆ, ವಂಚನೆ ಇತ್ಯಾದಿಗಳನ್ನು ರಂಜನೀಯವಾಗಿ ತೋರಿಸುವ ಮೂಲಕ ನೋಡುಗರ ಮನಸ್ಸನ್ನು ಹಿಂಸೆ–ಕ್ರೌರ್ಯಕ್ಕೆ ಸಜ್ಜುಗೊಳಿಸುವ ಕೆಲಸ ಮಾಡುತ್ತಿವೆ.

ಸಾಹಿತ್ಯ, ಸಂಗೀತ, ಚಿತ್ರಕಲೆ, ರಂಗಭೂಮಿಯಂಥ ಕಲೆಯ ಸಂಪರ್ಕ ಮನುಷ್ಯನ ಭಾವಕೋಶವನ್ನು ಸೂಕ್ಷ್ಮಗೊಳಿಸುತ್ತದೆ. ಆದರೆ, ಮಾಧ್ಯಮಗಳ ರಂಜನೆಯ ಪ್ರಭಾವಳಿ ಮನುಷ್ಯನನ್ನು ಜೀವಪರ ಕಲೆಗಳ ಸಂಪರ್ಕದಿಂದಲೇ ದೂರವಾಗಿಸುತ್ತಿದೆ. ಯುವತಲೆಮಾರಿನ ಕೆಲವರು ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿರುವುದರಲ್ಲಿ ಚಲನಚಿತ್ರಗಳ ಪ್ರಭಾವವೂ ಇದೆಯೆನ್ನುವುದು ಹಲವು ಪ್ರಕರಣಗಳಲ್ಲಿ ಬೆಳಕಿಗೆ ಬಂದಿದೆ.

## ಮುಂದೇನು? ಆಗಬೇಕಾದುದೇನು?

ಮನುಷ್ಯ ಮನುಷ್ಯನಾಗಿ ಉಳಿಯುವುದು ಸದ್ಯದ ಜಗತ್ತು ಎದುರಿಸುತ್ತಿರುವ ಬಹು ದೊಡ್ಡ ಸವಾಲು. ಈ ಸವಾಲಿಗೆ ಉತ್ತರ ಕಂಡುಕೊಳ್ಳುವ ದಾರಿಯಲ್ಲೇ ಬುದ್ಧ, ಬಸವ, ಗಾಂಧಿಯಂಥ ರೂಪಕಗಳು ಸೃಷ್ಟಿಯಾದವು. ಈ ರೂಪಕಗಳ ಬೆಳಕಿನಲ್ಲಿ ನಡೆಯುವುದಷ್ಟೇ ನಮಗೆ ಸದ್ಯಕ್ಕೆ ಉಳಿದಿರುವ ದಾರಿ.

ಬದುಕನ್ನು ಆದಷ್ಟೂ ಸರಳಗೊಳಿಸುವುದರಲ್ಲಿ ವರ್ತಮಾನದ ಬಹುತೇಕ ಸಮಸ್ಯೆಗಳಿಗೆ ಉತ್ತರವಿದೆ. ಬದುಕು ಸರಳವಾಗುತ್ತಾ ಹೋದಂತೆ, ಸ್ಪರ್ಧಾತ್ಮಕ ಜಗತ್ತಿನ ಪೊಳ್ಳುತನ ಅರ್ಥವಾಗುತ್ತಾ ಹೋಗುತ್ತದೆ. ಸುಖದ ಸಾರ್ಥಕತೆಯಿರುವುದು ವ್ಯಕ್ತಿಗತ ಆನಂದದಲ್ಲಲ್ಲ; ಸಮಷ್ಟಿಯ ನೆಮ್ಮದಿಯಲ್ಲಿ ಎನ್ನುವ ಅರಿವು ಎಲ್ಲರದಾದರೆ ನಮ್ಮ ಬದುಕು ಸಹನೀಯವಾಗುತ್ತದೆ.

ಶಿಕ್ಷಣ ಕ್ಷೇತ್ರದಲ್ಲಿ ಆಮೂಲಾಗ್ರ ಬದಲಾವಣೆ ಆಗುವುದು ಇಂದಿನ ತುರ್ತು ಅಗತ್ಯ. ಶಿಕ್ಷಣ ಕ್ಷೇತ್ರ ಈಗಿನಂತೆಯೇ ಜಡವಾಗಿ ಮುಂದುವರಿದರೆ, ಯಾಂತ್ರಿಕ ಪೀಳಿಗೆಗಳನ್ನಷ್ಟೇ ರೂಪಿಸತೊಡಗುತ್ತೇವೆ. ‘ಕೃತಕ ಬುದ್ಧಿಮತ್ತೆ’ ಜಗತ್ತನ್ನು ದೊಡ್ಡ ಪ್ರಮಾಣದಲ್ಲಿ ಆವರಿಸಿಕೊಳ್ಳುತ್ತಿದೆಯಷ್ಟೇ. ನಮ್ಮ ಬದುಕೂ ಕೃತಕವಾಗುತ್ತಿರುವ ದಿನಗಳಿವು. ಆ ಬದುಕಿಗೆ ಸಂವೇದನೆಗಳನ್ನು, ಮೌಲ್ಯಗಳನ್ನು ತುಂಬಿಕೊಳ್ಳುವುದು ಸಾಧ್ಯವಾಗದೆ ಹೋದರೆ ನಮ್ಮದು ಭಸ್ಮಾಸುರನ ಕಥೆಯೇ ಆಗುತ್ತದೆ.

ಪ್ರತಿಕ್ರಿಯಿಸಿ: feedback@sudha.co.in



## ‘ನಾನು’ ಎಂಬ ಸ್ವಾರ್ಥದ ಹಿಂದೆ...

ಮನುಷ್ಯನ ಸಂಬಂಧವೇ ಈಗ ಸಂಕೀರ್ಣ ವಿಷಯವಾಗಿದೆ. ಆಸೆಗಳಿಗೆ ಮಿತಿ ಇಲ್ಲ. ಅಗತ್ಯ, ಅವಶ್ಯಕತೆ, ಅನಿವಾರ್ಯತೆಗಳು ಹೆಚ್ಚಿವೆ. ಇವೆಲ್ಲಕ್ಕಿಂತ ಹೆಚ್ಚಾಗಿ ಆಸೆಗೆ ಕಡಿವಾಣ ಎಂಬುದೇ ಇಲ್ಲವಾಗಿದೆ. ಎಲ್ಲದಕ್ಕೂ ಒಳ್ಳೆಯದು ಕೆಟ್ಟದು ಎಂಬ ಎರಡು ಮುಖವಿದ್ದಂತೆ, ಜಾಗತೀಕರಣಕ್ಕೂ ಎರಡು ಮಗ್ಗಲುಗಳಿವೆ. ಇದರಲ್ಲಿ ಒಳ್ಳೆಯದನ್ನು ತೆಗೆದುಕೊಳ್ಳುವುದಕ್ಕಿಂತ ಹೆಚ್ಚಾಗಿ ಬೇಡವಾದದ್ದನ್ನೇ ತೆಗೆದುಕೊಳ್ಳುತ್ತಿದ್ದೇವಾ ಎಂದು ಅನಿಸುತ್ತಿದೆ.

ನಮ್ಮಲ್ಲಿ ಸ್ವಾರ್ಥ ಹೆಚ್ಚಾಗಿದೆ. ‘ನಾವು’ ಎಂಬುದು ಮರೆಮಾಚಿ ‘ನಾನು’ ಎನ್ನುವುದೇ ಮುಂದೆ ಬರುತ್ತಿದೆ. ಕೊರೊನಾ ಅವಧಿಯಲ್ಲಿನ ಲಾಕ್‌ಡೌನ್ ನಂತರವಂತೂ ಸ್ವಾರ್ಥದ ಮಟ್ಟ ಮಿತಿ ಮೀರಿದೆ ಅನ್ನಿಸುತ್ತದೆ. ‘ನನಗೇನು ಸಿಗುತ್ತದೆ’ ಎಂದಷ್ಟೇ ಯೋಚಿಸುತ್ತಿದ್ದೇವೆ. ಎಲ್ಲದರಲ್ಲೂ ‘ನನ್ನದು’ ಎಂಬುದನ್ನಷ್ಟೇ ಕೇಂದ್ರೀಕರಿಸಿಕೊಂಡು ನೋಡುತ್ತಿದ್ದೇವೆ. ನಮ್ಮೊಳಗೆಯೇ ಕಿತ್ತಾಟಗಳು, ದ್ವೇಷಗಳು, ಅಸೂಯೆಗಳು ಹೆಚ್ಚುತ್ತಿವೆ.

ತಾಂತ್ರಿಕವಾದ, ಹೊಸತನದ ಜಗತ್ತು ತೋರುತ್ತಿರುವ ಬಣ್ಣದ ಬದುಕಿಗೆ ಆಕರ್ಷಿತರಾಗುತ್ತಿದ್ದೇವೆ. ಹಾಗಾಗಿ ನಮ್ಮನ್ನು ನಾವು ಕಳೆದುಕೊಂಡು ‘ನಾನು’ ಎನ್ನುವ ‘ಈಗೊ’ ಹೆಚ್ಚಾಗಿದೆ.

ಎಲ್ಲವೂ ದುಡ್ಡಿನ ಮೇಲೆ ನಿಲ್ಲುತ್ತಿದೆ. ಆಸ್ತಿ, ಬಟ್ಟೆ, ತೋರ್ಪಡಿಕೆ, ಆಡಂಬರ– ಹೊರನೋಟವನ್ನೇ ಮುಖ್ಯವಾಗಿಸಿಕೊಂಡಿರುವ ಕಾರಣಕ್ಕೆ ಅದಕ್ಕೆ ಬೇಕಾದ ಎಲ್ಲವನ್ನೂ ಮಾಡಲು ಅಣಿಯಾಗುತ್ತಾರೆ. ಹೀಗಾಗಿ ಹಣದ ಆಸೆ ಬಂತೆಂದರೆ ಯಾರನ್ನೂ ಕೊಲ್ಲಬಲ್ಲರು. ಆಸ್ತಿ ಕಾರಣವಾಗಿಯೇ ತಂದೆ–ಮಗ, ಅಣ್ಣ ತಮ್ಮ, ಅಕ್ಕ ತಂಗಿಯರ ಕೊಲೆಗಳು ನಡೆದ ಎಷ್ಟು ಉದಾಹರಣೆಗಳು ನಮ್ಮ ಕಣ್ಣ ಮುಂದಿಲ್ಲ? ತಂದೆ ಮಗಳನ್ನು, ಅಣ್ಣನೇ ತಂಗಿಯನ್ನು ಅತ್ಯಾಚಾರ ಮಾಡಿದ ಎಷ್ಟು ಪ್ರಕರಣಗಳು ನಡೆದಿಲ್ಲ?

ಅಪರಾಧಗಳ ಪ್ರಕರಣಗಳ ನಿಯಂತ್ರಣದಲ್ಲಿ ವ್ಯವಸ್ಥೆ ಕೂಡ ಗಟ್ಟಿಯಾಗಿಲ್ಲ. ಇವೆಲ್ಲವೂ ಪರೋಕ್ಷ ಪ್ರಚೋದನೆಗಳಾಗಿವೆ.

ನ್ಯೂಕ್ಲಿಯರ್ ಫ್ಯಾಮಿಲಿಗಳು ಈಗ ಹೆಚ್ಚಾಗಿವೆ. ತಿಳಿ ಹೇಳುವವರು ಇಲ್ಲ, ಹೇಳಿದರೂ ಕೇಳುವ ವ್ಯವಧಾನ ಇಲ್ಲ. ಸ್ವತಂತ್ರವಾಗಿ ಬದುಕಬೇಕು ಎಂದು ಸ್ವೇಚ್ಛಾಚಾರಕ್ಕೆ ತೆರೆದುಕೊಳ್ಳುತ್ತಾರೆ. ಈ ಸ್ವೇಚ್ಛೆ ಮಿತಿ ಮೀರುತ್ತಿದೆಯೇನೋ ಎಂಬ ಆತಂಕವೂ ಶುರುವಾಗಿದೆ.

ಆದರೆ ಭವಿಷ್ಯದ ಬಗ್ಗೆ ಭರವಸೆ ಬಿಡಬಾರದು. ಇವೆಲ್ಲಕ್ಕೂ ಮದ್ದಿನಂತೆ ನಮ್ಮ ಮನೆಗಳಲ್ಲೇ ಪಾಠ ಶುರುವಾಗಬೇಕು. ಮಕ್ಕಳಿಗೆ ಅವರಿಗೆ ಅರಿವಾಗುವಂತೆ ಆಲೋಚನೆಗಳು, ಮೌಲ್ಯಗಳನ್ನು ಬಿತ್ತಬೇಕು.

–ದಾಕ್ಷಾಯಿಣಿ ಭಟ್, ರಂಗಕರ್ಮಿ